# ರಾವಣನ ಮಾವನ ಮನೆ

ಕಳೆದ ಡಿಸೆಂಬರ್‌ನಲ್ಲಿ ರಾಜಸ್ಥಾನದ ಜೋಧಪುರಕ್ಕೆ ಪ್ರವಾಸ ಹೋಗಿದ್ದಾಗ ಅಲ್ಲಿನ ಮಂಡೋರ್ ಉದ್ಯಾನವನಕ್ಕೆ ಭೇಟಿಕೊಟ್ಟಿದ್ದೆವು. ಅದು ರಾವಣನ ಹೆಂಡತಿ ಮಂಡೋದರಿಯ ತವರು ಮನೆ ಅಂತ ಸ್ಥಳೀಯರು ನಂಬಿದ್ದಾರೆ. ಅಲ್ಲಿ ಶಿಥಿಲವಾದ ಕೋಟೆಯ ಜೊತೆಗೆ ಸುಂದರ ಕೆತ್ತನೆಯ ಸೊಗಸಾದ ದೇವಾಲಯಗಳು ಇವೆ. ಕೋಟೆಯ ಒಳಗಡೆ ಇರುವದರಲ್ಲಿ ಸುಭದ್ರವಾಗಿರುವ ಕೆಲವು ಕಟ್ಟಡಗಳಲ್ಲಿ ವಸ್ತು ಸಂಗ್ರಹಾಲಯವಿದ್ದು ಹಳೆಯ ಕಾಲದ ರಾಜರು ಹಾಗು ಸಾಮಾನ್ಯ ಜನರು ಬಳಸುತ್ತಿದ್ದ ವಸ್ತುಗಳನ್ನು ನೋಡಬಹುದು. ಶಿಥಿಲವಾದ ಕೋಟೆಯ ಒಂದು ಮೂಲೆಯಲ್ಲಿ ಲಕ್ಷ್ಮಿನರಸಿಂಹಸ್ವಾಮಿಯ ದೇವಾಲಯವಿದ್ದು ಈಗಲೂ ಪೂಜೆ ನಡೆಯುತ್ತಿದೆ. ನಾವು ದೇವಸ್ಥಾನಕ್ಕೆ ಭೇಟಿಕೊಡಲು ಹೋದಾಗ ಜೀವಂತ ಶ್ವಾನ ದೇವಸ್ಥಾನದ ಮೇಲೆ ಮೂಲೆಯಲ್ಲಿ ಕೆತ್ತಿದ ಶಿಲ್ಪದ ಭಂಗಿಯಲ್ಲಿ ನಮ್ಮ ಕ್ಯಾಮೆರಾಕ್ಕೆ ಸೆರೆಸಿಕ್ಕಿದ್ದು ಒಂದು ಸೋಜಿಗ.

—ಡಾ.ಜಿ .ಬಿ. ಕೃಷ್ಣಪ್ಪ, ಮೈಸೂರು





# ಕಲ್ಲಿನ ಕೊಳ

ಆಧುನಿಕರು ಇಂದು ನೀರನ್ನು ಸಂಗ್ರಹಿಸಲು ಪ್ಲಾಸ್ಟಿಕ್ ಕೊಳಗಳನ್ನು ಬಳಸುತ್ತಿದ್ದರೆ, ಹಿಂದೆ ರಾಜ ಮಹಾರಾಜರು ಅವುಗಳನ್ನು ಒಂದೆ ಕಲ್ಲಿನಲ್ಲಿ ಕೆತ್ತುವ ಮೂಲಕ ಶಾಶ್ವತವಾಗಿ ಇರಿಸುತ್ತಿದ್ದರು. ವಿಶ್ವ ಪ್ರಸಿದ್ದ ಹಂಪೆಯ ಮಹಾನವಮಿ ದಿಬ್ಬದ ಬಳಿ ಒಂದೇ ಕಲ್ಲಿನಲ್ಲಿ ನೀರಿನ ಕೊಳವನ್ನು ಅದ್ಭುತವಾಗಿ ನಿರ್ಮಿಸಿದ್ದಾರೆ. ಅದು ಸಣ್ಣ ಮಕ್ಕಳು ಈಜುವಂತೆ ವಿಶಾಲವಾಗಿದೆ. ಈ ಕಲ್ಲಿನ ಕೊಳ ನೋಡುಗರಿಗೆ ಬೆರಗು ಹುಟ್ಟಿಸುತ್ತದೆ.

ಡಾ.ಮಲ್ಲಿಕಾರ್ಜುನ ಕುಂಬಾರ
(ರಾಜೂರ)

# ಬೆರಳು ನೆರಳಿನಾಟ

ಬೆಂಗಳೂರಿನ ಕಾಡುಬೀಸನಹಳ್ಳಿಯಲ್ಲಿರುವ ಸಿಸ್ಕೊ ಕಂಪನಿಯ ಕಚೇರಿಯ ಆವರಣದಲ್ಲಿ ಈ ರೀತಿಯ ವಿಶಿಷ್ಟ ನಿರ್ಮಾಣವಿದೆ. ಜೊತೆಯಲ್ಲೇ ಪ್ರಕೃತಿಯನ್ನು ನಾವು ಉಳಿಸದಿದ್ದರೆ ಅದು ನಮ್ಮನ್ನು ಕಾಪಾಡಲಾರದು ಎಂಬ ಎಚ್ಚರಿಕೆಯೂ ಇದೆ. ಐದು ಬೆರಳುಗಳ ನಡುವೆ ಅರಳಿದಂತಿರುವ ಈ ಮರ ಬೆರಳುಗಳಿಗೆ ನೆರಳು ನೀಡಿದೆ. ಬೆರಳು ಬೆಳಕುಗಳ ನೆರಳಿನಾಟ ಮನಕ್ಕೆ ತಂಪು ನೀಡುತ್ತದೆ . ಮಾಹಿತಿ ತಂತ್ರ ಜ್ಞಾನ ಕಂಪನಿಯ ಪರಿಸರ ಪ್ರೇಮಕ್ಕೆ ಜೀವಂತ ಉದಾಹರಣೆಯಾಗಿರುವ ಇದು ನೀನೆನಗಿದ್ದರೆ ನಾ ನಿನಗೆ ಎನ್ನುತ್ತಿರಬಹುದೇ?

—ವಾ. ಮುರಳೀಧರ,ತೀರ್ಥಹಳ್ಳಿ

